ಗೂಡಲ್ಲಿ ಇದ್ದೆವಷ್ಟೇ. ಕಣ್ಣುಮುಚ್ಚಿ ಕಣ್ಣು ತೆರೆಯುವಷ್ಟು ವೇಗದಲ್ಲಿ ಕ್ಷಣಗಳು ನಿಮಿಷಗಳಾಗಿ, ಅವು ಗಂಟೆಗಳಾಗಿ, ಅವೆಲ್ಲ ಕೂಡಿ ತಿಂಗಳು, ವರುಷವಾಗಿ, ಪುತ್ರಿಯ ಎಲ್.ಕೆ.ಜಿ ಪರೀಕ್ಷೆ ಮುಗಿದು ಫಲಿತಾಂಶ ಹೊರಬಿದ್ದು, ಅವಳು ಯು.ಕೆ.ಜಿಗೆ ತೇರ್ಗಡೆ ಹೊಂದಿರುವ ಸುದ್ದಿ ಸವಿಯಲು, ನಾನೇ ಖುದ್ದು ಹೋದೆ. ಪುಟ್ಟದಾಗಿ ಗೊಂಬೆಯಂತೆಯೇ ಇದ್ದ ಮಗುವನ್ನು ಎತ್ತಿ ಮುದ್ದಿಸಿ, ಪ್ರೋಗ್ರೆಸ್ ಕಾರ್ಡ್ ಅದರ ಕೈಯಲ್ಲಿಟ್ಟು, ಐಸ್‌ಕ್ರೀಮ್ ಕೊಡಿಸಿ ಸಂಭ್ರಮಿಸಿದೆ. ಮಗು ಶಾಲೆಯ ಪರಿಸರಕ್ಕೆ ಒಗ್ಗಿಕೊಳ್ಳುವಂತಾಯಿತಲ್ಲ ಎಂಬ ಖುಷಿಯಲ್ಲಿ ದಿನಗಳು ಸರಿಯತೊಡಗಿದವು. ಹೆಚ್ಚುಕಮ್ಮಿ ಜಗತ್ತಿನ ಎಲ್ಲ ಅಪ್ಪಂದಿರಂತೆ, ನನ್ನ ಪುತ್ರಿಯ ಅಪ್ಪನೂ ಈ ಯಾವುದರ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳಲಿಲ್ಲ. 'ಯಾಕೆ ಅಷ್ಟು ತಲೆಬಿಸಿ ಮಾಡಿಕೋಬೇಕು? ಅದೇನು ಐ.ಎ.ಎಸ್ ಪರೀಕ್ಷೆ ಬರೆಯೋಕ್ಕೆ ಹೊರಟಿದೆಯಾ?' ಹೀಗೆಲ್ಲ ಜೋರು ಮಾಡಿದ್ದರು ಸಹ. ಯು.ಕೆ.ಜಿಯ ಪುಸ್ತಕಗಳು ಕೈ ಸೇರಿದವು. ರಜೆ ಕಳೆದು ಮಗು, ಹುಣ್ಣಿಮೆಯ ಚಂದಿರನಂತೆ, ಶಾಲೆಗೆ ಮುಖ ಮಾಡಿತು. ಅವಳಲ್ಲಿ ಕಂಡ ಪರಿವರ್ತನೆಯಿಂದ ನಾನು ಸಂತೋಷಭರಿತಳಾದೆ. ಆದರೆ ಅದು ಹೆಚ್ಚು ಕಾಲ ಅಲ್ಲ ಒಂದು ದಿನಕ್ಕಿಂತ ಜಾಸ್ತಿ ಉಳಿಯಲಿಲ್ಲ. ಶಾಲೆಯಿಂದ ಅವಳು 'ಬೇಬಿ ಸಿಟ್ಟಿಂಗ್'ಗೆ ಹೋಗುತ್ತಿದ್ದಳು. ನಾನು ಆಫೀಸಿಂದ ಮನೆಗೆ ಮರಳುವಾಗ ಜೊತೆಯಾಗುತ್ತಿದ್ದಳು. ಶಾಲೆಯ ಆರಂಭದ ದಿನ, ಬೆಳಿಗ್ಗೆ ಆನಂದದಿಂದ ಹೊರಟ ಮಗು, ಸಂಜೆ ಮಂಕಾಗಿ ಕಂಡಳು. ಮನೆಗೆ ಬರುತ್ತಿದ್ದಂತೆ ರಚ್ಚೆ ಹಿಡಿದಳು. 'ನಾನು ನಾಳೆಯಿಂದ ಸ್ಕೂಲಿಗೆ ಹೋಗೋಲ್ಲ.' ನಾನು ರಮಿಸಿ ಕೇಳಿದೆ, 'ಯಾಕೆ ಮುದ್ದು? ಏನಾಯಿತು?' ನನ್ನ ಭುಜವನ್ನು ತಬ್ಬಿದ ಮಗು ಉಲಿಯಿತು, 'ನಾನು ಪಾಸಾಗಿ ಯು.ಕೆ.ಜಿ ಗೆ ಬಂದೆ. ನಮ್ಮ ರಮಾ ಮಿಸ್ ಫೇಲ್ ಆಗಿ, ಅಲ್ಲೇ ಇದಾರೆ. ನನ್ನೂ ಫೇಲ್ ಮಾಡಿಸಿ, ಅಲ್ಲೇ ಕೂರಿಸು.' ರಮಾ ಮಿಸ್ ಎಲ್.ಕೆ.ಜಿ ಕ್ಲಾಸ್ ಟೀಚರ್. ಅವರು ಪ್ರತಿವರ್ಷ ಅಲ್ಲೇ ಇರತಾರೆ. ಅವರು ಯಾವ ಪರೀಕ್ಷೆಯು ಬರೆಯೋಲ್ಲ.' ಈ ಯಾವ ಮಾತು ಅವಳ ಹೃದಯ ಮುಟ್ಟಲಿಲ್ಲ. ಅಂತೂ ಬೇಸರದಲ್ಲೇ ಯು.ಕೆ.ಜಿ ಪೂರೈಸಿದಳು. ಮತ್ತದೇ ಫಲಿತಾಂಶದ ದಿನ ಬಂತು. ಈ ಬಾರಿ ಅವಳ ಕ್ಲಾಸ್ ಮಿಸ್ ಎಷ್ಟೇ ಹುಡುಕಿದರೂ, ಆ ಅವಿಚ್ಛಿನ್ನ ಶಿಷ್ಯೆಯ ಅಂಕಪಟ್ಟಿ ದೊರೆಯಲಿಲ್ಲ. ಪೋಷಕಿ ಸಾಕ್ಷಾತ್ ನಾನೇ ಎದುರಿದ್ದುದು, ಆಕೆಯಲ್ಲಿ ಆತಂಕ ಉಂಟು ಮಾಡಿದ್ದು ಎದ್ದು ಕಾಣುತಿತ್ತು. ಕಡೆಗೆ ಆಕೆ, ನಮ್ಮ ಸುಪುತ್ರಿಯ ಉತ್ತರ ಪತ್ರಿಕೆ ನನ್ನ ಮುಂದಿಟ್ಟರು. ಏನಿದೆ ಅಲ್ಲಿ? ಪ್ರಶ್ನೆ ಅದರ ಅಡಿಯಲ್ಲಿ ಉತ್ತರ ಬರೆಯಲು ಜಾಗ. ಅದರದ್ದೇ ಪುನರಾವರ್ತನೆ. ಉತ್ತರ ತುಂಬಬೇಕಾದ ಸ್ಥಳವೆಲ್ಲ ಹೆಚ್ಚುಕಮ್ಮಿ ಖಾಲಿ. ಎಲ್ಲ ವಿಷಯದ ಪ್ರಶ್ನಪತ್ರಿಕೆಯ ಸ್ಥಿತಿಯು ಒಂದೇ ಸಮ. ಆ ಟೀಚರ್ ಚಡಪಡಿಸತೊಡಗಿದಳು, 'ಮೇಡಂ, ಪ್ರೋಗ್ರೆಸ್ ಕಾರ್ಡ್ ಸಿಗತಾನೇ ಇಲ್ಲ.' ನಾನೇ ಆಕೆಯನ್ನು ಸಮಾಧಾನ ಪಡಿಸಿದೆ. 'ಎಲ್ಲ ಪೇಪರ್ ನೋಡಿದೆ. ಪ್ರೋಗ್ರೆಸ್ ಇಲ್ಲದ ಮೇಲೆ, ಪ್ರೋಗ್ರೆಸ್ ಕಾರ್ಡ್ ಚಿಂತೆ ಯಾಕೆ ಮಾಡ್ತೀರಿ?.' ತಾಯಿ, ತಂದೆಯರ ಕಳವಳವನ್ನೇ ಕಂಡಿದ್ದ ಆಕೆಗೆ ನಾನು ನಡೆದುಕೊಂಡ ರೀತಿ ವಿಚಿತ್ರವಾಗಿ ಕಂಡಿತು. ಆಗ ಮಗುವನ್ನು ಮುಂದಿನ ತರಗತಿಗೆ ಹಾಕುವ ಎಲ್ಲ ಸಾಧ್ಯತೆಯಿದ್ದರೂ, ನಾನು ಒಪ್ಪದೇ ಹೋದೆ. ಮಗು ಓದುತ್ತಿದ್ದ ತರಗತಿಗೇ, ವಯಸ್ಸಿನ ದೃಷ್ಟಿಯಲ್ಲಿ ಬಹಳ ಚಿಕ್ಕದು. ಅದರ ಮೇಲೆ ಒಂದನೇ ತರಗತಿಗೆ ದಾಟಿಸಿಬಿಟ್ಟರೆ, ಹೋಗಹೋಗುತ್ತ ಅದಕ್ಕೆ ಕಲಿಕೆ ಇನ್ನು ಕಷ್ಟವಾಗುವುದು ಎಂಬ ವಿವೇಕ ನನ್ನ ಹಾಗೂ ನನ್ನ ಮಗುವನ್ನು ಕಾಪಾಡಿತು. ಯು.ಕೆ.ಜಿಯಲ್ಲಿ ಪುನಃ ಕಲಿಯಲಿ, ಆಗ ವಯಸ್ಸು ಸರಿಹೊಂದುತ್ತದೆ ಎಂಬ ಕಾಳಜಿಯಿಂದ, ಬೇರೆ ಶಾಲೆಗೆ ಸೇರಿಸಿ, ಅವಳ ವಿದ್ಯಾಭ್ಯಾಸ ಮುಂದುವರಿಸಿದೆ. ಅವಳು ಶಾಲೆಯ ವಾತಾವರಣಕ್ಕೆ ಹೊಂದಿಕೊಳ್ಳತೊಡಗಿದಳು. ಆ ಶಾಲೆಯು